ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 24-28
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಯುವಸ್ಫೂರ್ತಿ ವಿವೇಕಾನಂದ

**ಡಾ.ಎನ್.ಸುಶೀಲಮ್ಮ**
ಅತಿಥಿ ಅಧ್ಯಾಪಕರು, ಗ್ರಾಮೀಣ ಅಭಿವೃದ್ಧಿ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

**Abstract:**
*ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು ನರೇಂದ್ರನ ವಿಷಯವನ್ನು ಒಮ್ಮೆ ಮಾತನಾಡುತ್ತಾ ಅವನೊಂದು ಸಹಸ್ರದಳದ ಕಮಲ, ಅಪರೂಪಕ್ಕೆ ಶತಮಾನಗಳಿಗೊಮ್ಮೆ ಇಂತಹ ವ್ಯಕ್ತಿ ವಿಕಾಸವಾಗುವುದು, ವಿಶ್ವ ಚೈತನ್ಯ ಇದೇ ಮಾನವ ಕೋಟಿಯ ಮೇಲೆ ಒಂದು ಅದ್ಭುತ ಪ್ರಭಾವವನ್ನು ಬೀರಬೇಕಾದಾಗ ಒಂದು ಅನನ್ಯ ಸಾಧಾರಣ ವ್ಯಕ್ತಿಯನ್ನು ತರುವುದು ಎಂದು ಹೇಳಿದರು. ಎಲ್ಲಾ ಶ್ರೇಷ್ಠವಾದ ವಸ್ತುಗಳನ್ನು ಒಬ್ಬ ವ್ಯಕ್ತಿಯಲ್ಲಿ ತುಂಬಿದಂತೆ ನರೇಂದ್ರನಾಥನ ಜೀವನದಲ್ಲಿ ಕಾಣಬಹುದು ಎಂದು ತನ್ನ ಅನಿಸಿಕೆಯನ್ನಯ ವ್ಯಕ್ತಪಡಿಸಿದರು.*

**Keywords:** *ಹಿಂದೂ ಧರ್ಮ, ವಿಶ್ವಧರ್ಮ ಸಮ್ಮೇಳನ, ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಯುವಸ್ಫೂರ್ತಿ.*

## ಪೀಠಿಕೆ

ವಿವೇಕಾನಂದರನ್ನು ಹೊರಗಿನಿಂದ ನೋಡಿದಾಗ ಅಜಾನುಬಾಹು, ಅವರ ನಿಲುವಿನ ಭಂಗಿಯೇ ಅವರ ಸಂದೇಶವನ್ನೆಲ್ಲ ಸಾರುವಂತಿದೆ. ಅವರು ವಿಶ್ವಧರ್ಮ ಸಮ್ಮೇಳನದಲ್ಲಿ ವೇದಿಕೆಯ ಮೇಲೆ ಕೈಕಟ್ಟಿಕೊಂಡು ಉಪನ್ಯಾಸ ಮಾಡುತ್ತಿರುವ ಚಿತ್ರದಲ್ಲಿ ಕಾಣುತ್ತಿತ್ತು. ಈ ಪ್ರಪಂಚದ ದೌರ್ಬಲ್ಯಗಳನ್ನೆಲ್ಲಾ ಎದುರಿಸುವ ಭಂಗಿ, ಅವರ ಶರೀರದಲ್ಲೆಲ್ಲ ಅತ್ಯಂತ ಆಕರ್ಷಣೀಯವಾದುದೆಂದರೆ, ಅವರ ಹೊಳೆಯುವ ವಿಶಾಲವಾದ ನೇತ್ರಗಳು, ಮಾಯೆಯ ಉದರದಲ್ಲಿರುವ ಸತ್ಯಗಳನ್ನು ಕ್ಷಣಾರ್ಧದಲ್ಲಿ ಕಿತ್ತು ಹೊರಗೆ ತರಬಲ್ಲಂತಹ ಶಕ್ತಿ ಸೂಚಕವಾಗಿದೆ.

ಒಂದು ಜೀವ ಒಂದು ವಾತಾವರಣದಲ್ಲಿ ಆಕಸ್ಮಿಕವಾಗಿ ಹುಟ್ಟುವುದಿಲ್ಲ. ಅದು ತನ್ನ ವ್ಯಕ್ತಿವಿಕಸನಕ್ಕೆ ಬೇಕಾದ ವಾತಾವರಣವನ್ನು ಆರಿಸಿಕೊಳ್ಳುತ್ತದೆ, ನರೇಂದ್ರನಾಥನು ಪ್ರಸಿದ್ಧ ದತ್ತವಂಶಕ್ಕೆ ಸೇರಿದವನು. ವಂಶಸ್ಥರೆಲ್ಲ ವಿದ್ವಾಂಸರು, ಸುಸಂಸ್ಕೃತರು, ತ್ಯಾಗಿಗಳು ಮತ್ತು ದಾನಿಗಳಾಗಿದ್ದರು. ವಂಶದ ಈ ಗುಣಗಳೇ ನರೇಂದ್ರನಲ್ಲಿ ಪೂರ್ಣತೆಯನ್ನು ಪಡೆಯುವಲ್ಲಿ ಸಹಕಾರಿಯಾಗಿವೆ.

ವಿಶಾಲ ಮರುಭೂಮಿಯ ಕರ್ಮಹೀನ ಮೃತ್ಯುಶಾಂತಿ, ಅಪಾರ ಸಮುದ್ರದ ನಿರಂತರೋತ್ಸವ, ಕರ್ಮಮಯಕ್ರಾಂತಿ, ಅನಂತಾಕಾಶದ ವಿಪುಲ ನೀಲ ಧ್ಯಾನಗಾಂಭೀರ್ಯ, ಮೇಘ ಚುಂಬಿತ ಮಹಾ ಪರ್ವತಶ್ರೇಣಿಯ ತಪೋಮಯ ಶಿಲಾಸ್ಥೈರ್ಯ, ದಿಗಂತ ವ್ಯಾಪಿಯಾದ ಮಹಾರಣ್ಯರಾಜಿಯ ಸುಂದರ ಸ್ವಚ್ಛಂಧ ಭೋಗೋನ್ಮಾದ ಮುಂತಾದವುಗಳೆಲ್ಲ ಹಾಸುಹೊಕ್ಕಾದಂತಿದ್ದು, ಸ್ವಾಮಿ ವಿವೇಕಾನಂದರ ಬ್ರಹ್ಮನ್ಮಹಾವ್ಯಕ್ತಿತ್ವದ ಸನ್ನಿವೇಶಗಳೂ ಸೂತ್ರಗಳಾಗಿ

**Please cite this article as:** ಸುಶೀಲಮ್ಮ, ಎನ್. (2026). ಯುವಸ್ಫೂರ್ತಿ ವಿವೇಕಾನಂದ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(6), 24–28

ಪ್ರಭಾವ ಬೀರಿವೆ. ಆ ಸೂತ್ರಗಳಲ್ಲಿ ಪರಂಪರಾಗತವಾಗಿ ಹರಿದು ಬರುವ ವಂಶಗುಣವೂ ಒಂದಾಗಿದೆ.

ನರೇಂದ್ರನ ತಂದೆ ವಿಶ್ವನಾಥದತ್ತ ತಾಯಿ ಭುವನೇಶ್ವರಿದೇವಿ. ವಿಶ್ವನಾಥದತ್ತನು ಮೂಲತಃ ವಕೀಲನಾಗಿದ್ದು ತಾಯಿ ಭುವನೇಶ್ವರಿದೇವಿ ಗೃಹಿಣಿಯಾಗಿದ್ದರು. ಇವರು ಮನೆಕೆಲಸವನ್ನು ನಿರ್ವಹಿಸುವ ಮೂಲಕ ತನ್ನ ಗಂಡನಲ್ಲಿದ್ದ ದಾನ, ಧರ್ಮ, ಅನುಕಂಪ ಮುಂತಾದವುಗಳನ್ನು ಮೆಚ್ಚಿದಂತೆ ಗೃಹಿಣಿಯಾಗಿದ್ದಳು.

ಭುವನೇಶ್ವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದರೂ ಗಂಡು ಸಂತಾನ ಇರಲಿಲ್ಲ. ಕಾಶಿಯಲ್ಲಿ ತಮ್ಮ ಮನೆದೇವರಾದ ವಿಶ್ವೇಶ್ವರನಿಗೆ ಕಾಶಿಯಲ್ಲಿದ್ದ ತಮ್ಮ ನೆಂಟರೊಬ್ಬರಿಗೆ ಪೂಜೆ ಮಾಡಲು ಕೋರಿದ್ದಳು. ಹೀಗಿರುವಾಗ ಒಂದು ದಿನ ಭುವನೇಶ್ವರಿದೇವಿಗೆ ಒಂದು ಕನಸಾಯಿತು. ಅದರಲ್ಲಿ ತೇಜಃಪುಂಜವಾದ ಧ್ಯಾನ ಮಗ್ನನಾಗಿರುವ ಮೂರ್ತಿಯನ್ನು ನೋಡಿದಳು. ನೋಡುತ್ತಿದ್ದಂತೆಯೇ ಅದು ಒಂದು ಸುಂದರ ಮಗುವಿನ ಆಕಾರವನ್ನು ತಾಳಿ ಬಂದು ಇವಳ ತೊಡೆಯ ಮೇಲೆ ಕುಳಿತುಕೊಂಡಿತು. ಈ ಆನಂದವನ್ನು ಪಡುತ್ತಿರುವಂತೆಯೇ ಕನಸು ಜಾರಿತು. ಇದರಂತೆ ಭಗವಂತನನ್ನು ಪ್ರಾರ್ಥಿಸತೊಡಗಿದಾಗ ಅದೊಂದು ದಿನ ಬಂದೇ ಬಿಟ್ಟಿತು.

ಜನವರಿ 12ನೇ ತಾರೀಖು, ಸೋಮವಾರ 1863ನೇ ಇಸವಿ. ಮಾಗಿಯ ಚಳಿ ದಟ್ಟವಾದ ಮಂಜು ದಟ್ಟಿಸಿ ಬೀಳುತ್ತಿದ್ದ ಪುಷ್ಯ ಸಂಕ್ರಾಂತಿಯ ಪುಣ್ಯ ಪ್ರಭಾತದಲ್ಲಿ ಕಲ್ಕತ್ತಾ ಮಹಾನಗರದ ನರನಾರಿಯರು ಗುಂಪುಗುಂಪಾಗಿ ಚಳಿಯಲ್ಲಿ ನಡುಗುತ್ತಾ ಮಕರ ಸಪ್ತಮಿಯ ಸ್ನಾನಕ್ಕಾಗಿ ಭಾಗೀರಥಿಗೆ ಹೋಗುತ್ತಿದ್ದರು. ಸಾವಿರಾರು ಗುಡಿಗಳಲ್ಲಿ ಗಂಟೆಗಳ ಶಬ್ಧ ಹಬ್ಬಿದ ಹೆಮ್ಮೆಯನ್ನು ಸೂಚಿಸುತ್ತಿದ್ದವು, ಆ ಮಂಗಳ ಸಮಯದಲ್ಲಿ ಸೂರ್ಯೋದಯಕ್ಕೆ ಆರು ನಿಮಿಷಗಳ ಪೂರ್ವದಲ್ಲಿ, ಅಂದರೆ ಆರುಗಂಟೆ ಮೂವತ್ತಮೂರು ನಿಮಿಷ ಮೂವತ್ತಮೂರು ಸೆಕೆಂಡುಗಳಿಗೆ ಸರಿಯಾಗಿ ಕೃಷ್ಣಪಕ್ಷದ ಸಪ್ತಮಿಯನ್ನು ಪುಣ್ಯ ಸಂಕ್ರಾಂತಿ ಹಬ್ಬದ ಆನಂದೋತ್ಸವ ನವಜಾತ ಶಿಶುವಿಗೆ ಸಾದರ ಸ್ವಾಗತ ನೀಡುವಂತೆ ಮಕ್ಕಳು ಕಲರವ ಮಾಡುತ್ತಿದ್ದರು. ಇಂತಹ ಶುಭ ದಿವಸದಲ್ಲಿ ಮಂಗಳ ಮುಹೂರ್ತದಲ್ಲಿ ಮುಂದೆ ಪ್ರವರ್ತಕನಾಗಲಿರುವ 'ಶ್ರೀ ಸ್ವಾಮಿವಿವೇಕಾನಂದ' ಮಹಾಪುರುಷರ ಜನ್ಮವಾಯಿತು.

ಹೀಗೆ ಜನಿಸಿದ ಶಿಶುವಿಗೆ ನಾಮಕರಣದ ಸಮಯ ಬಂದಾಗ ತನ್ನ ತಾಯಿಯ ಪೂಜೆಗಳು ಮತ್ತು ಕನಸಿನ ಫಲಗಳಂತೆ ಮಗನನ್ನು ವೀರೇಶ್ವರ ಎಂದು ಕರೆದರೆ, ಅನ್ನಪ್ರಾಶನ ಸಮಯದಲ್ಲಿ ಶಿಶುವನ್ನು ನರೇಂದ್ರನಾಥ ಎಂದು ಕರೆಯಲು ರೂಢಿಗೆ ಬಂತು. ಆದರೂ ತಾಯಿ ಭುವನೇಶ್ವರಿದೇವಿ ತನ್ನ ಮುದ್ದಿನ ಮಗನನ್ನು 'ಬಿಲೆ' ಎಂದೂ ಕರೆಯುತ್ತಿದ್ದರು. ಕಾಲಾನಂತರವಾಗಿ ಸ್ವಾಮಿವಿವೇಕಾನಂದ ಎಂದೂ ಲೋಕರೂಢಿಯಾಗಿ ನಾಮಾಂಕಿತವಾಯಿತು.

**ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದ**

1893ನೇ ಸೆಪ್ಟೆಂಬರ್ 11ನೆಯ ತಾರೀಖಿನಂದು ಅಮೇರಿಕಾದ ಚಿಕಾಗೋ ಶಹರದಲ್ಲಿ ಸೇರಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರಿಗೆ ಅಮೇರಿಕನ್ನರು ನೀಡಿದ ಸ್ವಾಗತವನ್ನು ನೆನಯುತ್ತಾ ಅಮೆರಿಕೆಯ ಸೋದರ ಸಹೋದರಿಯರೆ, ನೀವು ನನಗೆ ನೀಡಿದ ಹೃತ್ಪೂರ್ವಕವಾದ, ಆದರಪೂರ್ವಕವಾದ ಸ್ವಾಗತಕ್ಕೆ ಉತ್ತರ ಕೊಡಲು ಮಾತಿಗೆ ನಿಲುಕದ ಆನಂದವು ನನ್ನ ಹೃದಯವನ್ನು ತುಂಬಿದೆ ಜಗತ್ತಿನ ಅತ್ಯಂತ ಆರ್ವಾಚೀನ ಸಾಧುಸಂತರ ಪರವಾಗಿ, ಎಲ್ಲ ಜಾತಿ ಮತ ಪಂಥದ ಲಕ್ಷೋಪಲಕ್ಷ ಹಿಂದೂ ಪ್ರಜೆಗಳ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಅನ್ಯಮತ ಸಹಿಷ್ಣುತೆ ಮತ್ತು ಮಾನ್ಯತೆಯನ್ನು ಲೋಕಕ್ಕೆಲ್ಲ ಕಲಿಸಿದ ಆ ಧರ್ಮಕ್ಕೆ ಸೇರಿದವನೆಂದು ನನಗೆ ಹೆಮ್ಮೆಯಾಗಿದೆ. ನಾವು ಕೇವಲ ಪರಮ ಸಹಿಷ್ಣುತೆಯನ್ನೇ ನಂಬುವುದಿಲ್ಲ; ಆದರೆ ಎಲ್ಲ ಧರ್ಮಗಳೂ ಸತ್ಯವೆಂದು ಒಪ್ಪಿಕೊಳ್ಳುತ್ತೇವೆ. ಈ ಜಗತ್ತಿನಲ್ಲಿ ಯಾವ ಧರ್ಮ ಮತ್ತು ಜನಾಂಗದ ಜನರನ್ನು ಪರಮತ ದ್ವೇಷದಿಂದ ಚಿತ್ರಹಿಂಸೆಗೆ ಗುರಿಪಡಿಸಿ ಹೊಡ ಓಡಿಸಿದ್ದಾರೆಯೋ ಅಂತಹ ಎಲ್ಲ ಧರ್ಮಾನುಯಾಯಿಗಳನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ರಕ್ಷಣೆ ಕೊಟ್ಟ ಜನಾಂಗಕ್ಕೆ ಸೇರಿದವನೆಂದು ನನಗೆ ಹೆಮ್ಮೆಯಾಗುತ್ತದೆ ಎಂದು ತಿಳಿಸಿದರು.

**ಹಿಂದೂ ಧರ್ಮ ಮತ್ತು ಸ್ವಾಮಿ ವಿವೇಕಾನಂದ**

ಸ್ವಾಮಿ ವಿವೇಕಾನಂದರು ಸೆಪ್ಟೆಂಬರ್ ತಿಂಗಳ 19ನೇ ತಾರೀಖು 1896ರ ಚಿಕಾಗೋ ಸಮ್ಮೇಳನದಲ್ಲಿ ಒಂದು ಲೇಖನವನ್ನು ಓದುತ್ತಾ ಹಿಂದೂ ಧರ್ಮದ ಬಗ್ಗೆ ಹೀಗೆ ಹೇಳಿದ್ದಾರೆ. ಹಿಂದೂಗಳು ತಮ್ಮ ಧರ್ಮವನ್ನು ದಿವ್ಯಜ್ಞಾನದಿಂದ ಮತ್ತು ವೇದಗಳಿಂದ ಪಡೆದಿದ್ದಾರೆ. ಆ ವೇದಗಳಿಗೆ ಆದಿ ಮತ್ತು ಅಂತ್ಯಗಳಿಲ್ಲ ಎಂದು ಅವರು ನಂಬುತ್ತಾರೆ. ಇದು ಈ ಸಭೆಗೆ ಕುಚೋದ್ಯವಾಗಿ ತೋರಬಹುದು. ಏಕೆಂದರೆ ಆದಿ–ಅಂತ್ಯವಿಲ್ಲದ ಆ ಪುಸ್ತಕ ಎಂತದೊ ಎಂದು, ವೇದ ಎಂದರೆ ಬರಿ ಪುಸ್ತಕವಲ್ಲ, ಅದು ವಿವಿಧ ಕಾಲಗಳಲ್ಲಿ ವಿವಿಧ ಜನರಿಂದ ಕಂಡ ಧಾರ್ಮಿಕ ದರ್ಶನಗಳು, ಸಂಗ್ರಹಿತ ಆಧ್ಯಾತ್ಮಿಕ ಸತ್ಯಗಳ ನಿಕ್ಷೇಪ ಎಂದರ್ಥ.

ಸೃಷ್ಟಿಗೆ ಆದಿ–ಅಂತ್ಯವಿಲ್ಲವೆಂದು ವೇದಗಳು ಹೇಳುತ್ತವೆ. ದೇವರು ನಿತ್ಯ ಸೃಷ್ಟಿಕರ್ತ. ಆತನ ಶಕ್ತಿಯಿಂದ ಈ ಸೃಷ್ಟಿಯಾಗುತ್ತದೆ. ಇದಕ್ಕೆ ಕೊನೆ–ಮೊದಲು ಯಾವುದೂ ಇರುವುದಿಲ್ಲ. ನಾನಿಲ್ಲಿ ಕಣ್ಣು ಮುಚ್ಚಿಕೊಂಡು ನನ್ನ ಇರುವಿಕೆಯನು ಗ್ರಹಿಸಲು ಪ್ರಯತ್ನಿಸಿ 'ನಾನು ನಾನು' ಎಂದುಕೊಂಡರೆ ನನ್ನ ಮುಂದಿರುವ ಭಾವವೇನು? ಈ ದೇಶದ ಭಾವವೇ ನಾನು ಈ ಜಡ ಪದಾರ್ಥಗಳ ಸಮ್ಮಿಶ್ರಣವೇ? ಎಂಬ ಭಾವನೆಗಳು ಬಂದಾಗ ಅಲ್ಲ ಎಂದು ಹೇಳುತ್ತವೆ ವೇದಗಳು. ದೇಹದಲ್ಲಿ ವಾಸಿಸುವ ಚೇತನ ನಾನು ದೇಹ ಸಾಯುತ್ತದೆ, ನಾನು ಸಾಯುವುದಿಲ್ಲ. ಹಾಗಾದರೆ ನನ್ನ ಪೂರ್ವಜನ್ಮದ ನೆನಪು ನನಗೇಕೆ ಇಲ್ಲ. ಇದಕ್ಕೆ ಸುಲಭವಾಗಿ ಉತ್ತರ ಹೇಳಬಹುದು. ಆದ್ದರಿಂದ ಹಿಂದೂ, ತಾನು ಚೇತನ ಎಂದು ನಂಬುತ್ತೇನೆ. ಅವನನ್ನು ಖಡ್ಗ ಕತ್ತರಿಸಲಾಗದು, ಬೆಂಕಿ ಸುಡಲಾರದು, ನೀರು ಕರಗಿಸಲಾರದು, ವಾಯು ಒಣಗಿಸಲಾಗದು, ಹಾಗಾದರೆ ಅಂಥ ಪರಿಪೂರ್ಣ, ಸ್ವತಂತ್ರ ವಸ್ತುವು ಈ ಜಡ ಭೌತಿಕ ವಸ್ತುವಿನ ಸೆರೆಯಾಳಾಗಿ ಏಕೆ ಇರಬೇಕು ಎಂಬುದು ಮುಂದಿನ ಪ್ರಶ್ನೆಯಾಗಿದೆ. ಆತ್ಮ ಅಮರ, ಸಾವೆಂದರೆ ಕೇವಲ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ರೂಪಾಂತರವಾಗುವುದಾಗಿದೆ ಎಂದು ತಿಳಿಸಿದ್ದಾರೆ.

ಹಿಂದೂ ಧರ್ಮದ ಪ್ರಕಾರ ಮನುಷ್ಯ ಅಸತ್ಯದಿಂದ ಯಾತ್ರೆ ಮಾಡುತ್ತಲ್ಲ. ಒಂದು ಸತ್ಯದಿಂದ ಮತ್ತೊಂದು ಸತ್ಯಕ್ಕೆ ಹೋಗುತ್ತಿದ್ದಾನೆ. ಭಾರತದಲ್ಲಿ ವಿಗ್ರಹಾರಾಧನೆ ಎಂದರೆ ಅದೇನೋ ಭಯಾನಕವಾದುದಲ್ಲ. ಅದು ಪರಕೀಯರ ಕೊಲೆಗೆ ಮಾತ್ರವಲ್ಲ. ಅದು ಪ್ರಾರಂಭದ ಲಕ್ಷಣವಾಗಿದೆ. ಭಾರತೀಯನು ತನ್ನ ದೇಹವನ್ನು ದಂಡಿಸಿಕೊಳ್ಳುತ್ತಾನೆಯೇ ಹೊರತು ಇತರರ ಕುತ್ತಿಗೆಯನ್ನು ಕತ್ತರಿಸುವುದಿಲ್ಲ. ಎಲ್ಲ ಮತಗಳಲ್ಲಿ ಸತ್ಯವಿದೆ ಎಂದು ಒಪ್ಪುತ್ತಾನೆ. ಶ್ರೀಕೃಷ್ಣಾವತಾರದಲ್ಲಿ ಈ ರೀತಿ ಸಾರುತ್ತಾರೆ.

'ಪೋಣಿಸಿದ ಮಣಿಗಳ ಮಧ್ಯದಲ್ಲಿರುವ ದಾರದಂತೆ ಎಲ್ಲ ಮಣಿಗಳಲ್ಲಿ ನಾನಿದ್ದೇನೆ ಎಲ್ಲೆಲ್ಲಿ ವಿಭೂತಿಯಿದೆಯೋ ಅಲ್ಲಲ್ಲಿ ನನ್ನ ಅಂಶವೇ ಇದೆ ತಿಳಿ' ಎಂದು ಹಿಂದೂ ಧರ್ಮದ ಸ್ಥೂಲಪರಿಚಯವನ್ನು ಮಾಡಿಕೊಡುತ್ತಾರೆ.

**ಯುವಕರಿಗೆ ಸ್ವಾಮಿ ವಿವೇಕಾನಂದರ ಕಲೆ**

ಭದ್ರ ಬುನಾದಿಯುಳ್ಳ ದೇಶದ ನಿರ್ಮಾಣದಲ್ಲಿ ಯುವಕರ ಪಾತ್ರ ಅಪಾರ. ಆದ್ದರಿಂದ ಯುವಕರ

ಪ್ರೇರಣೆಗಾಗಿ ಸ್ವಾಮಿ ವಿವೇಕಾನಂದರು ಪ್ರಜ್ವಲವಾಗಿ ಕರೆ ನೀಡಿದ್ದಾರೆ. ಅದರಂತೆ 'ನನ್ನ ಭರವಸೆಯೆಲ್ಲ ಈಗಿನ ಯುವಕರ ಮೇಲೆ ನಿಂತಿದೆ. ಇದರಿಂದ ಕೆಲಸ ಮಾಡುವ ಯುವಕರು ನಮಗೆ ಬರಬೇಕಾಗಿದೆ. ಅನಂತರ ಅವರು ಕೆಲಸ ಮಾಡುವರು. ನಾನು ಹೇಗೆ ಮಾಡಬೇಕೆಂಬುದನ್ನು ಹೇಳಿರುವೆನು. ನಾನು ಅದಕ್ಕೆ ನನ್ನ ಜನ್ಮವನ್ನೇ ಕೊಟ್ಟಿರುವೆನು. ನಾನು ಜಯಶೀಲನಾಗದೆ ಹೋದರೆ, ಅದನ್ನು ಮಾಡಲು ಮತ್ತೊಬ್ಬರು ಬರುವರು, ಹೋರಾಟದಲ್ಲೇ ನನಗೆ ತೃಪ್ತಿ ಇದೆ.

ನಾಡಿನ ಯುವಕರೇ, ನನ್ನ ಭರವಸೆಯೆಲ್ಲಾ ನಿಮ್ಮ ಮೇಲಿದೆ. ನಿಮ್ಮ ದೇಶದ ಕರೆಗೆ ಕಿವಿಗೊಡುವಿರೇನು, ನನ್ನ ಮಾತಿನಲ್ಲಿ ನಿಮಗೆ ನಂಬಿಕೆ ಇರುವುದಾದರೆ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಭವ್ಯವಾದ ಭವಿಷ್ಯವಿದೆ. ನಿಮ್ಮಲ್ಲಿ ನಿಮಗೆ ಅಪಾರವಾದ ನಂಬಿಕೆ ಬೆಳೆಯಲು ಅನಂತಶಕ್ತಿ ಪ್ರತಿ ಜೀವಿಯ ಅಂತರಾಳದಲ್ಲಿ ಇರುವುದು ಎಂಬ ಆತ್ಮಶ್ರದ್ಧೆ ನಿಮ್ಮಲ್ಲಿರಲಿ ನೀವು ಇಡೀ ಭತರಖಂಡವನ್ನು ಜಾಗ್ರತೆಗೊಳಿಸುವಿರ. ಆಗ ನಾವು ಜಗತ್ತಿನ ಇತರೆ ದೇಶಗಳಿಗೆಲ್ಲ ಹೋಗುವೆವು. ಭರತಖಂಡದಲ್ಲಿ ಮತ್ತು ವಿದೇಶಗಳಲ್ಲಿ ಎಲ್ಲಾ ಜನಾಂಗಗಳ ಜೀವನದ ಅಂತರಾಳಕ್ಕೆ ನಾವು ಹೋಗಬೇಕು. ಇದನ್ನು ಸಾಧಿಸುವುದಕ್ಕೆ ನನಗೆ ಯುವಕರು ಬೇಕು ಶಿಷ್ಯ, ಮೇಧಾವಿಗಳು ಆದಂತಹ ಯುವಕರು ಮಾತ್ರ ಭಗವಂತನನ್ನು ಪಡೆಯಬಹುದು ಎಂದು ವೇದ ಸಾರುತ್ತದೆ.

ಒಳ್ಳೆಯ ಶೀಲವಂತರಾದ, ಬುದ್ಧಿವಂತರಾದ, ತಮ್ಮ ಸರ್ವಸ್ವವನ್ನೂ ತ್ಯಾಗಮಾಡುವಂತಹ ವಿಧೇಯರಾಗಿರುವ, ನನ್ನ ಭಾವನೆಗಳನ್ನು ಕಾರ್ಯರೂಪಕ್ಕೆ ತರಲು ತಮ್ಮ ಪ್ರಾಣವನ್ನೇ ಅರ್ಪಿಸಬಲ್ಲ ಯುವಕರ ಮೇಲೆ ನನ್ನ ಭವಿಷ್ಯದ ಆರೈಕೆಯೆಲ್ಲಾ ನಿಂತಿದೆ. ಅದರಿಂದ ದೇಶ ಮತ್ತು ಅವರಿಗೂ ಒಳ್ಳೆಯದಾಗುವುದು.

ಅವರಲ್ಲಿ ಯಾರು ಒಳ್ಳೆಯವರೆಂದು ತೋರುವರೋ ಅವರಲ್ಲಿ ಕೆಲವರು ಮದುವೆಯ ಬಂಧನಕ್ಕೆ ಸಿಲುಕಿದ್ದಾರೆ. ಕೆಲವರು ಪ್ರಾಪಂಚಿಕ ಹೆಸರು. ಕೀರ್ತಿ, ಐಶ್ವರ್ಯಕ್ಕೆ ತಮ್ಮನ್ನು ಮಾರಿಕೊಂಡಿದ್ದಾರೆ. ಕೆಲವರು ನಿಶಕ್ತರು, ಉಳಿದವರಲ್ಲಿ ಅವರೇ ಹೆಚ್ಚು ಮಂದಿ ಯಾವ ಉತ್ತಮ ಆದರ್ಶಗಳನ್ನು ಪಡೆಯಲೂ ಯೋಗ್ಯರಲ್ಲ, ನೀನೇನೆ ನನ್ನ ಆದರ್ಶ ಭಾವನೆಗಳನ್ನು ಹೊಂದಲು ಅರ್ಹ. ಆದರೆ ಅದನ್ನು ವ್ಯವಹಾರದಲ್ಲಿ ತರಲು ನಿನಗೆ ಸಾಧ್ಯವಿಲ್ಲ. ಕಾರಣಗಳಿಂದ ಒಮ್ಮೊಮ್ಮೆ ನನ್ನ ಮನಸ್ಸು ರೊಚ್ಚಿಗೇಳುವುದು. ಈ ಮಾನವ ದೇಹ ಧರಿಸಿರುವುದರಿಂದ ಇದು ಅಡ್ಡಿ ಬಂದು ನನಗೆ ಹೆಚ್ಚು ಕೆಲಸ ಮಾಡಲಾಗಲಿಲ್ಲ. ಆದರೂ ನಾನು ಸಂಪೂರ್ಣ ನಂಬಿಕೆ ಕಳೆದುಕೊಂಡಿಲ್ಲ. ಏಕೆಂದರೆ ದೇವರ ಇಚ್ಛೆಯಿಂದ ಈ ಕೆಲವು ಹುಡುಗರಿಂದಲೇ ಮುಂದೆ ಅನೇಕ ದೊಡ್ಡ ಕರ್ಮವೀರರು, ಆಧ್ಯಾತ್ಮಿಕ ವೀರರು, ಹುಟ್ಟಿ ಬಂದು ನನ್ನ ಉದ್ದೇಶಗಳನ್ನು ಭವಿಷ್ಯದಲ್ಲಿ ಕಾರ್ಯರೂಪಕ್ಕೆ ತರಬಹುದು.

ಯಾರು ನಿಜವಾಗಿಯೂ ಯೋಗಿಗಳಾಗಬೇಕೆಂದು ಬಯಸುವರೋ ಅವರು ಎಲ್ಲವನ್ನೂ ಸ್ವಲ್ಪ ಸ್ವಲ್ಪ ರುಚಿ ನೋಡುವ ಅಭ್ಯಾಸವನ್ನು ಒಂದೇ ಸಲ ಬಿಟ್ಟು ಬಿಡಬೇಕು. ಒಂದು ಭಾವನೆಯನ್ನು ತೆಗೆದುಕೊಂಡು, ಅದನ್ನು ನಿಮ್ಮ ಜೀವನದಲ್ಲಿ ಅಭ್ಯಾಸಮಾಡಿ, ಅದನ್ನೇ ಆಲೋಚನೆಮಾಡಿ, ಅದನ್ನೇ ಕನಸು ಕಾಣಿ, ಆ ಒಂದು ಭಾವನೆಗಾಗಿ ನಿಮ್ಮ ಬಾಳನ್ನೆಲ್ಲ ಸವೆಸಿ ಮೆದುಳು, ಮಾಂಸಖಂಡಗಳು, ನರಗಳು ಮತ್ತು ನಿಮ್ಮ ದೇಶದ ಪ್ರತಿಯೊಂದು ಭಾಗವೂ ಕೂಡ ಆ ಭಾವದಿಂದ ತುಂಬಿ ತುಳುಕಾಡಲಿ, ಉಳಿದ ಆಲೋಚನೆಗಳನ್ನೆಲ್ಲ ಅವುಗಳ ಪಾಡಿಗೆಬಿಡಿ. ಜಯಪಡೆಯುವುದಕ್ಕೆ ಇದೊಂದೇ ದಾರಿ. ಮಹಾ ಆಧ್ಯಾತ್ಮಿಕ ವೀರರು ಆಗುವ ರೀತಿ ಇದು.

ಉಳಿದವರು ಕೇವಲ ಮಾತನಾಡುವ ಯಂತ್ರಗಳು, ನಾವು ನಿಜವಾಗಿಯೀ ಮುಕ್ತರಾಗಬೇಕಾದರೆ ಮತ್ತು ಇತರರನ್ನು ಬಂಧ ಮುಕ್ತರನ್ನಾಗಿ ಮಾಡಬೇಕಾದರೆ ನಾವು ಇನ್ನೂ ಆಳವಾಗಿ ಯೋಚಿಸಬೇಕು. ದೇವರು ಇದನ್ನು ಜಗಳ

ಕಾಯುವುದಕ್ಕಿಂತ ಹೆಚ್ಚಾಗಿ ಮಹಾತ್ಕಾರ್ಯಗಳನ್ನು ಸಾಧಿಸಬೇಕಾಗಿದೆ. ನಿಮ್ಮ ಕೆಲಸ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರವಿದೆ. ಅದರ ಪ್ರತಿಫಲಗಳಿಗಲ್ಲ ಎಂಬುದನ್ನು ನಿನಗೆ ಮತ್ತೊಮ್ಮೆ ಜ್ಞಾಪಿಸುತ್ತಿದ್ದೇನೆ ಎಂದೂ ಕರೆ ನೀಡಿದ್ದಾರೆ.

ನಮಗೆ ಇಂದು ಬೇಕಾಗಿರುವುದು ಶಕ್ತಿ. ಅದಕ್ಕಾಗಿಯೇ ನಿಮ್ಮಲ್ಲಿ ಆತ್ಮವಿಶ್ವಾಸವಿರಲಿ. ನಾವು ದುರ್ಬಲರಾಗಿದ್ದೇವೆ. ಅದಕ್ಕಾಗಿಯೇ ಈ ರಹಸ್ಯ. ಈ ಮಾಯಾಮಂತ್ರಗಳೆಲ್ಲ ನಮ್ಮನ್ನು ಆವರಿಸಿಕೊಂಡಿವೆ. ಅವುಗಳಲ್ಲಿ ಸ್ವಲ್ಪ ಸತ್ಯವಿರಬಹುದು. ಆದರೆ ಇವು ನಮ್ಮನ್ನು ಸರ್ವನಾಶಮಾಡಿವೆ. ಮೊದಲು ನಿಮ್ಮ ನರಗಳನ್ನು ಸದೃಢಪಡಿಸಿ, ನಮಗೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸ ಖಂಡಗಳು, ಉಕ್ಕಿನಂತಹ ನರಗಳು, ನಿಮ್ಮ ಕಾಲಿನ ಮೇಲೆ ನಿಂತು ಪುರಷಸಿಂಹರಾಗಿ ಮಾಡುವ ಧರ್ಮ, ವಿದ್ಯಾಭ್ಯಾಸ ಇಂದು ಬೇಕಾಗಿದೆ.

ಮತ್ತೊಂದು ವಿಚಾರವೆಂದರೆ ಆತ್ಮಕ್ಕೆ ಸಂಬಂಧಪಟ್ಟ ಭಾವನೆ. ಅದರ ಅನಂತ ಶಕ್ತಿ, ಪರಿಶುದ್ಧತೆ ಮತ್ತು ಪರಿಪೂರ್ಣತೆ, ನೀವು ಶ್ರೇಷ್ಠರೆಂದು ಭಾವಿಸಿ ಶ್ರೇಷ್ಠರಾಗುವಿರಿ. ಏಳಿ ಜಾಗೃತರಾಗಿ, ಗುರಿಯನ್ನು ಮುಟ್ಟುವವರೆಗೂ ನಿಲ್ಲ ಬೇಡಿ, ಯುವಕರೇ ಜಾಗೃತರಾಗಿ ಏಳಿ ಸಮಯ ಸನ್ನಿಹಿತವಾಗಿದೆ. ನಿಮ್ಮ ಕಣ್ಣ ಮುಂದೆ ಆಗಲೇ ಎಲ್ಲಾ ವಿಕಾಸವಾಗುತ್ತಿದೆ. ನಿರ್ಭೀತರಾಗಿ, ಅಂಜಬೇಡಿ. ಆಗ ನಮ್ಮ ಕೆಲಸ ಪರಿಪೂರ್ಣವಾಗುವುದು ಏಳಿ ಜಾಗೃತರಾಗಿ ನಮ್ಮ ದೇಶಕ್ಕೆ ಅದ್ಭುತ ತ್ಯಾಗ ಬೇಕಾಗಿದೆ. ಯುವಕರು ಮಾತ್ರ ಇದನ್ನು ಮಾಡಬಲ್ಲರು.

ಮನುಷ್ಯನಿಂದ ರೂಪಾಯಿ ಆಗುವುದು? ರೂಪಾಯಿಯಿಂದ ಮನುಷ್ಯನಾಗುವುದಿಲ್ಲ. ಅಂದರೆ ನೀವು ಬಾಯಲ್ಲಿ ಆಡುವುದು, ಮನಸ್ಸಿನಲ್ಲಿ ಯೋಚಿಸುವುದೂ ಒಂದೇ ಆಗುವುದಾದರೆ, ಆಡುವ ಮಾತು, ಮಾಡುವ ಕೆಲಸವು ಒಂದೇ ಆಗಿದ್ದಲ್ಲಿ ಹಣ ತನ್ನಷ್ಟಕ್ಕೆ ತಾನೇ ನೀರಿನಂತೆ ನಿಮ್ಮ ಬಳಿ ಬಂದು ಸುರಿಯುತ್ತದೆ.

ಯುವಕರ ಹೃದಯ ವಿಶಾಲಗೊಳ್ಳಲು ತ್ಯಾಗ ಮುಖ್ಯ ಎಂದು ಹೇಳಿದ್ದಾರೆ. ತ್ಯಾಗಿಯಲ್ಲದವನು ಮತ್ತೊಬ್ಬರಿಗಾಗಿ ಹೃತ್ಪೂರ್ವಕ ಸೇವೆ ಮಾಡಲಾಗುವುದಿಲ್ಲ. ತ್ಯಾಗಿ ಎಲ್ಲರನ್ನೂ ಒಂದೇ ಸಮನಾಗಿ ನೋಡುವವನು. ಎಲ್ಲರ ಸೇವೆಗೂ ಸಿದ್ಧನಾಗಿರುವನು. ನಮ್ಮ ವೇದಾಂತವೂ ಎಲ್ಲರನ್ನು ಸಮದೃಷ್ಟಿಯಿಂದ ಕಾಣಬೇಕೆಂದು ಹೇಳುವುದಿಲ್ಲ. ಹಾಗಾದ ಮೇಲೆ ನೀನೇಕೆ ನಿನ್ನ ಹೆಂಡತಿ ಮಕ್ಕಳು ಇತರರೆಲ್ಲರಿಗಿಂತ ಹೆಚ್ಚು ಸೇರಿದವರು ಎಂಬ ಭಾವನೆಯನ್ನು ಇನ್ನೂ ಹೊಂದಿದ್ದೀಯೆ? ನಿನ್ನ ಮನೆ ಅಂಗಳದಲ್ಲೇ ನಾರಾಯಣನು ಬಡ ಭಿಕ್ಷುಕನ ರೂಪದಲ್ಲಿ ಉಪವಾಸದಿಂದ ಸಾಯುತ್ತಿದ್ದಾನೆ. ಅವನಿಗೇನಾದರೂ ನೀಡುವ ಬದಲು ನಿನ್ನ ಹೆಂಡತಿ ಮಕ್ಕಳನ್ನು ಮಾತ್ರ ಮೃಷ್ಟಾನ್ನದಿಂದ ತೃಪ್ತಿಪಡಿಸುತ್ತೀದ್ದೀಯ, ಇದು ಮೃಗೀಯ ವರ್ತನೆ, ಆದ್ದರಿಂದ ನಿನ್ನ ಕೈಯಲ್ಲಿದ್ದಷ್ಟು ಮಟ್ಟಿಗಾದರೂ ಸಹಾಯ ಮಾಡು, ಹಣವಿಲ್ಲದಿದ್ದರೂ, ಒಳ್ಳೆಯ ಮಾತನ್ನು ಮತ್ತು ಒಳ್ಳೆಯ ಬೋಧನೆ ಹೇಳಬಾರದೆ ಎಂದು ಕರೆ ನೀಡುವ ಮೂಲಕ ಯುವಕರನ್ನು ಎಚ್ಚರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಸ್ವಾಮಿ ಸೋಮನಾಥಾನಂದ. (೧೯೯೮). ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ. ಶ್ರೀರಾಮಕೃಷ್ಣ ಆಶ್ರಮ
- Rangachari, D. (2011). *Swami Vivekananda: A Man with a Vision*. Penguin UK.
- Vivekananda, S. (1947). The complete works of Swami Vivekananda. In *Medical Entomology and Zoology*. https://ci.nii.ac.jp/ncid/BA29350981